# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

ಸಿ.ಸಿ. ನಂ. : 120/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಸುಹಾಸಿನಿ ದೇಸಾಯಿ | ಪಿ.ಡಬ್ಲ್ಯೂ: 1 |
| ಗಂಡನ ಹೆಸರು | : | ಪ್ರದೀಪ ದೇಸಾಯಿ | ಸಿ.ಡಬ್ಲ್ಯೂ: 1 |
| ವಯಸ್ಸು | : | 70 ವರ್ಷ | |
| ಉದ್ಯೋಗ | : | ನಿವೃತ್ತ ವೈದ್ಯರು | |
| ವಾಸ್ತವ್ಯ | : | ಕಾರವಾರ | |

ಸತ್ಯ ಪ್ರತಿಜ್ಞೆಯ ಮೇರೆಗೆಃ12-07-2022

## ಕಲಂ. 299 ರಡಿಯಲ್ಲಿ ಸಾಕ್ಷಿಯ ಸಾಕ್ಷ್ಯ ವಿಚಾರಣೆ

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದಃ**

ಕಾರವಾರದ ಸಿವಿಲ್ ಕೋರ್ಟ ರಸ್ತೆಯಲ್ಲಿ ನನಗೆ ಸೇರಿದ ಸಂಜೀವಿನಿ ಕ್ಲಿನಿಕ್ ಇರುತ್ತದೆ. ಸದ್ರಿ ಕ್ಲಿನಿಕ ನ್ನು ನಾನು ಮತ್ತು ಯಜಮಾನರು ಸೇರಿಕೊಂಡು ನಡೆಸುತ್ತೇವೆ. ನಮ್ಮ ಕ್ಲಿನಿಕ್ ಪ್ರತಿದಿನ ಬೆಳಿಗ್ಗೆ 10-00 ರಿಂದ 12-00 ಗಂಟೆ ತನಕ ಮತ್ತು ಸಂಜೆ 5-00 ರಿಂದ 7-00 ಗಂಟೆ ತನಕ ನಡೆಯುತ್ತದೆ. ಸದ್ರಿ ಕ್ಲಿನಿಕ್ ಮೇಲೆ 2 ನೇ ಮಹಡಿಯಲ್ಲಿ ನಮ್ಮ ಮನೆ ಇರುತ್ತದೆ. ದಿಃ 16-01-2017 ರಂದು ಬೆಳಿಗ್ಗೆ 7-00 ಗಂಟೆ ಸಮಯದಲ್ಲಿ ಕ್ಲಿನಿಕ ನ್ನು ಸ್ವಚ್ಛಗೊಳಿಸಲು ಹೋದಾಗ ಅದರ ಬಾಗಿಲಿನ ಬೀಗವನ್ನು ಯಾರೋ ಒಡೆದು ಹಾಕಿ ಒಳಗಡೆ ಹೋಗಿ ಡ್ರಾ ನಲ್ಲಿಟ್ಟ 2500 ರೂ. ಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವುದು ಕಂಡು ಬಂತು. ಆಗ ನಾನು ಪೊಲೀಸ್ ಠಾಣೆಗೆ ದೂರನ್ನು ದಾಖಲು ಮಾಡಿರುತ್ತೇನೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ.

ಸಿ.ಸಿ. ನಂ. :120/2022

ಪಿ.ಡಬ್ಲ್ಯೂ: 1 ಸಿ.ಡಬ್ಲ್ಯೂ: 1

ನಾನು ದೂರನ್ನು ಕೊಟ್ಟ ನಂತರ ಪೊಲೀಸರು ನಮ್ಮ ಕ್ಲಿನಿಕ್ ಗೆ ಬಂದು ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡು ಹೋಗಿರುತ್ತಾರೇ. ಸದ್ರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ಪೊಲೀಸರು ನನಗೆ ಕಳ್ಳತನ ಮಾಡಿದ ವ್ಯಕ್ತಿಗಳನ್ನು ತೋರಿಸಿರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ.ಸ.ಅ. ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು** )

**ಪಾಟೀ ಸವಾಲುಃ ಹಿರಿಯ ಸ.ಸ.ಅ. ರವರಿಂದಃ**

ದಿಃ 22-01-2017 ರಂದು ಪೊಲೀಸರು ನನ್ನನ್ನು ಮತ್ತು ನನ್ನ ಗಂಡನನ್ನು ಪೊಲೀಸ್ ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿದರು ಎಂದರೆ ಸರಿಯಲ್ಲ. ಆಗ ನಾನು ಅವರನ್ನು ನೋಡಿ ಗೊರುತಿಸಿ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ನನ್ನ ಮರು ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ನಾನು ನಿಪಿ.3 ರಂತೆ ಮರು ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಮುಖ್ಯ ನಾಯಿಕ ದಂಡಾಧಿಕಾರಿಗಳು,

ಕಾರವಾರ